

# ಅರಳುವ ಹೂಗಳನ್ನು ಅರಿಯುವುದು ಹೇಗೆ?

**ಬುದ್ಧಿಮಾಂದ್ಯತೆಯ ಪರಿಣಾಮಗಳು ಪ್ರಮುಖವಾಗಿ ತೋರುವುದು ಹೊಸತರ ಕಲಿಕೆಯಲ್ಲಿ; ಎಷ್ಟೋ ಬಾರಿ ಕಣ್ಣಿಂದ ನಾವು ಅವಲೋಕಿಸಿದ್ದರೂ, ಬುದ್ಧಿಪೂರ್ವಕವಾಗಿ ವಿಶ್ಲೇಷಿಸಿರುವುದಿಲ್ಲ.**

**■ ಡಾ. ಕೆ.ಎಸ್. ಪವಿತ್ರ**

ಬುದ್ಧಿವಂತಿಕೆಯ ಬಗೆಗೆ ನಮಗೆಲ್ಲರಿಗೂ ಗೊತ್ತು. ಅಂಕ, ಶಾಲೆ ನಂತರ ಉದ್ಯೋಗ ಗಳಿಕೆ ಇವುಗಳ ಹಿಂದೆ ಓಡುವ ನಾವೆಲ್ಲ ಶೇ. 1ರ ಪ್ರಮಾಣದಲ್ಲಿ ಸಮಾಜದಲ್ಲಿರುವ 'ಬುದ್ಧಿಮಾಂದ್ಯತೆ' ಎಂಬ ಸಮಸ್ಯೆಯನ್ನು ನಿರ್ಲಕ್ಷಿಸಿ ಬಿಡುತ್ತೇವೆ.

ಐಕ್ಯೂ ಗೊತ್ತಲ್ಲ? ಬುದ್ಧಿವಂತಿಕೆಯ ಪ್ರಮಾಣವನ್ನು ನಿರ್ದಿಷ್ಟವಾಗಿ ಹೇಳುವ ಸಂಖ್ಯೆ. ದೇಹಕ್ಕಾಗುವ ವಯಸ್ಸಿಗೂ, ಮೆದುಳಿನ ಪ್ರಬುದ್ಧತೆಗೂ ಇರುವ ಸಂಬಂಧವನ್ನು ಈ ಅನುಪಾತ ಹೇಳುತ್ತದೆ. ಇದರ ಪ್ರಮಾಣ ಸಾಮಾನ್ಯವಾಗಿ 90ರಿಂದ 110ರವರೆಗೆ ಇರುತ್ತದೆ. ಇದು ಸಾಮಾನ್ಯ/ಸಹಜ ಬುದ್ಧಿವಂತಿಕೆ **(normal/average intelligence)** 70ಕ್ಕಿಂತ ಕಡಿಮೆಯಾದರೆ ಅದನ್ನು 'ಬುದ್ಧಿಮಾಂದ್ಯತೆ' ಎಂದು ಗುರುತಿಸಲಾಗುತ್ತದೆ. 70ರಿಂದ 90ರ ಮಧ್ಯೆ 'ಗಡಿರೇಖೆಯ ಬುದ್ಧಿಮತ್ತೆ' **(Borderline intelligence)** ಎಂದು ಕರೆಯಲಾಗುತ್ತದೆ. ಹೀಗೆ ಐಕ್ಯೂವಿನ ಬಗ್ಗೆ, ಈ ಸಂಖ್ಯೆಗಳ ಬಗ್ಗೆ ಬಹುಜನರಿಗೆ ಗೊತ್ತಿರುತ್ತದೆ. ಆದರೆ ಬುದ್ಧಿಮಾಂದ್ಯತೆ, ಗಡಿರೇಖೆಯ ಬುದ್ಧಿಮತ್ತೆಯ ಬಗ್ಗೆ ಪ್ರಾಯೋಗಿಕವಾದ, ಸ್ಪಷ್ಟ ಅರಿವಿನ ಕೊರತೆ ತುಂಬಾ ಜನರನ್ನು ಕಾಡುತ್ತದೆ. ಇದರ ಪರಿಣಾಮಗಳು ಹಲವು. ಬುದ್ಧಿಮಾಂದ್ಯತೆಗೆ ಒಳಗಾದ ಮಕ್ಕಳು, ಅವರ ಅಪ್ಪ ಅಮ್ಮ ಇತರರ ಸಹಾಯ ಪಡೆದುಕೊಳ್ಳದಿರುವುದು, ಸಮಾಜದ ಇತರರು ಈ ಮಕ್ಕಳನ್ನು ಗೌರವಿಸದಿರುವುದು, ಕಂಡರೆ ಹೆದರುವುದು, ಅವರಿಗಾಗಿ ತೆರೆಯಲ್ಪಟ್ಟ ವಿಶೇಷ ಶಾಲೆಗಳು ಬೆಂಬಲವನ್ನು ಸರಿಯಾಗಿ ಪಡೆಯದಿರುವುದು ಇತ್ಯಾದಿ...

ಬುದ್ಧಿಮಾಂದ್ಯತೆಯ ಸಮಸ್ಯೆಯಿರುವ ಮಕ್ಕಳನ್ನು ಮನೋವೈದ್ಯರಲ್ಲಿಗೆ ಕರೆತರುವ ಸಂದರ್ಭಗಳನ್ನು ಮೊದಲು ನೋಡೋಣ. ಮೂರು ಮುಖ್ಯ ಸಮಸ್ಯೆಗಳಿಗಾಗಿ ಇಂತಹ ಮಕ್ಕಳನ್ನು ಕರೆತರಲಾಗುತ್ತದೆ. ಮೊದಲನೆಯದು ಮಗಳಿಗೆ 18ರ ವಯಸ್ಸು. ಬುದ್ಧಿಮಾಂದ್ಯತೆಯಿದ್ದರೂ ಅಲ್ಲಿಯವರೆಗೆ ಅದರ ಬಗ್ಗೆ ಗಮನಹರಿಸಿರುವುದಿಲ್ಲ. ಈಗ ಅಪ್ಪಅಮ್ಮನಿಗೆ ಮದುವೆಯ ಚಿಂತೆ. ಹಾಗಾಗಿ ಒಮ್ಮೆ ವೈದ್ಯರಿಗೆ ತೋರಿಸಿ ಬಿಡೋಣ ಎಂದು ಬರುತ್ತಾರೆ. ಮತ್ತೊಂದು ಸಂದರ್ಭ ಮಗುವಿಗೆ ಬುದ್ಧಿಮಾಂದ್ಯತೆಯ ಜೊತೆಗೆ ಇರಬಹುದಾದ ಇತರ ಸಮಸ್ಯೆಗಳು. ಮೂರ್ಛೆರೋಗ, ಮಾತು ಬರದಿರುವುದು, ನಡವಳಿಕೆಯ ಸಮಸ್ಯೆಗಳು, ಅತಿ ಚಟುವಟಿಕೆ, ಇತರರ ಮೇಲೆ ಹಿಂಸೆ, ತನಗೇ ಸ್ವತಃ ಹಿಂಸೆ ಕೊಟ್ಟುಕೊಳ್ಳುವುದು.. ಇವುಗಳ ಚಿಕಿತ್ಸೆಗೆಂದು ಬಂದಾಗ ಮಗುವಿಗೆ 'ಬುದ್ಧಿಮಾಂದ್ಯತೆ'ಯೂ ಇದೆ ಎಂದು ವೈದ್ಯರು ಗುರುತಿಸಬಹುದು. ಮೂರನೆಯ ಸಂದರ್ಭ 'ಏನು ಮಾಡಿದರೂ ಮಕ್ಕಳಿಗೆ ಓದು ಹತ್ತುತ್ತಿಲ್ಲ/ಇಲ್ಲಿಯವರೆಗೂ ಶಾಲೆಯವರು ಪಾಸ್ ಮಾಡಿಕೊಂಡು ಬಂದಿದ್ದಾರೆ, ಆದರೆ ಈಗ ಹತ್ತನೇ ಕ್ಲಾಸಿಗೆ ಟಿ.ಸಿ. ಕೊಡ್ತೀವಿ, ಬೇರೆ ಶಾಲೆಗೆ ಕರೆದುಕೊಂಡು ಹೋಗಿ ಎನ್ನುತ್ತಿದ್ದಾರೆ. ಅದಕ್ಕೇ ಒಂದು ಸಾರಿ ತೋರಿಸಿಬಿಡೋಣ ಎಂದು ಕರೆದುಕೊಂಡು ಬಂದೆವು' ಎಂಬುದು.

'ತಮ್ಮ ಮಗು ಇಂಥದ್ದನ್ನು ಮಾಡುತ್ತಿಲ್ಲ' (ನಮ್ಮ ಮಗು ಎರಡು ವರ್ಷವಾದರೂ ಮಾತನಾಡುತ್ತಿಲ್ಲ/ ನಡೆಯುತ್ತಿಲ್ಲ/ 10 ವರ್ಷವಾದರೂ ಸ್ನಾನ ಮಾಡಲು ಬರುವುದಿಲ್ಲ/ ಶೌಚದ ನಂತರ ತಾನೇ ಸ್ವಚ್ಛಗೊಳಿಸಿಕೊಳ್ಳಲು ಬರುವುದಿಲ್ಲ) ಎಂದು ಕರೆದುಕೊಂಡು ಬರುವವರು ಬಲು ಕಡಿಮೆ.

ಅಚ್ಚರಿಯ ಸಂಗತಿ ಎಂದರೆ ಹೀಗೆ ಬರುವ ಬಹು ಜನ ಅಪ್ಪ ಅಮ್ಮಂದಿರಿಗೆ ಬುದ್ಧಿಮಾಂದ್ಯತೆಯ